**<u>ದಿನಾಂಕಃ 12.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರಿದ ಪಾಟೀ ಸವಾಲು: ಶ್ರೀಮತಿ ಬಿ.ಟಿ.ಎಸ್., ಪ್ರತಿವಾದಿ ಪರ ವಕೀಲರಿಂದ</u>**

ನಾನು 4 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಸೈಟಿನ ಸಂಬಂಧ ಈದಾವೆ ಹೂಡಿದ್ದೇವೆ. ದಾವೆಯನ್ನು ನಾಗರಾಜ, ಬಾಲರಾಜ್ ಮತ್ತು ವೆಂಕಟೇಶ್ ಇವರ ಮೇಲೆ ಹಾಕಿರುತ್ತೇನೆ. 3 ನೇ ಪ್ರತಿವಾದಿ ನನ್ನ ಸಂಬಂಧಿಕರು. ನನ್ನ ಗಂಡನ ಮನೆ ಬೂದಿಹಳ್ಳಿ. ನನ್ನ ತವರೂರು ದೊಡ್ಡೇರಿ ಗ್ರಾಮ. ನನ್ನ ಮದುವೆಯಾಗಿ ಸುಮಾರು 40 ವರ್ಷ ಆಗಿರುತ್ತದೆ. ಯಾವ ವರ್ಷದಲ್ಲಿ ಮದುವೆಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಜನ್ಮ ದಿನಾಂಕ ನೆನಪಿಲ್ಲ. ದಾವೆಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ದಾವಾ ಸ್ವತ್ತಿನ ಸೈಟಿ ಸಂಖ್ಯೆ 94. ವಿಸ್ತೀರ್ಣ ಹೇಳಲಾಗುವುದಿಲ್ಲ. ದಾವಾ ಸ್ವತ್ತನ್ನು ಪುಸಭೆಯವರು 2 ನೇ ಪ್ರತಿವಾದಿ ಹೆಸರಿಗೆ ಮಂಜೂರು ಮಾಡಿದ್ದಾರೆ ಎಂದರೆ ಸಾಕ್ಷಿಯು ನನ್ನ ತಂದೆ ರಂಗಣ್ಣ ಅದನ್ನು ಗಂಗಣ್ಣ ಎಂದು ತಾಪ್ಪಗಿ ನಮೂದಿಸಿ ಮಂಜೂರು ಮಾಡಿರಬಹುದು ಎಂದು ನುಡಿಯುತ್ತಾರೆ. ಪುರಸಭೆ ಯಿಂದ ದಾವಾ ಸ್ವತ್ತನ್ನು ನಮಗೆ ಮಂಜೂರು ಮಾಡಿಲ್ಲ ಎಂದರೆ ಸರಿಯಲ್ಲ. ಮಂಜೂರಾಗಿದೆ ಎಂದು ತೋರಿಸಲು ದಾಖಲೆ



ಇರುತ್ತದೆ. ಮಂಜೂರು ಆಗಿದೆ ಎಂದು ತೋರಿಸಲು ನೊಂದಾಯಿತ ಪತ್ರ , ಕಂದಾಯ ರಸೀದಿ ಮತ್ತು ಪೋಟೋ ಹಾಜರು ಪಡಿಸಿರುತ್ತೇನೆ. ನನಗೆ ಪುರಸಭೆಯಿಂದ ಹಕ್ಕು ಪತ್ರ ಕೊಟ್ಟಿರುತ್ತಾರೆ. ಹಕ್ಕು ಪತ್ರವನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿಲ್ಲ ಕಾರಣ ಅದನ್ನು ನಾನು 3 ನೇ ಪ್ರತಿವಾದಿಗೆ ಕೊಟ್ಟಿದೆ. 3 ನೇ ಪ್ರತಿವಾದಿಗೆ ಹಕ್ಕು ಪತ್ರ ಕೊಟ್ಟಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 2 ನೇ ಪ್ರತಿವಾದಿಗೆ ಮಂಜೂರಾಗಿದ್ದು ಈ ದಿನವದವರೆಗೂ ದಾವಾ ಸ್ವತ್ತಿನ ಮಾಲೀಕರು ಮತ್ತು ಕಬ್ಜೆಯನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯವರು ಕಂದಾಯ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. 14.12.2010 ರಂದು 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ 1 ನೇ ಪ್ರತಿವಾದಿಯು ಸೈಟ್ ಸಂಖ್ಯೆ 97 ಅನ್ನು

ಬಿ. ಗೌರಮ್ಮ ಕೋಂ ಗಿಡ್ಡ ಬೋರಯ್ಯ, ಸೈಟ್ ನಂ. 98 ನ್ನು ಅನ್ನಪೂರ್ಣ ಕೋಂ ಅನುಮೇಶಿ ಇವರಿಂದ ಒಂದೇ ಕ್ರಯ ಪತ್ರದಲ್ಲಿ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಅಕ್ಕಪಕ್ಕದಲ್ಲಿ ಸದರಿ ಸೈಟ್ 97 ಮತ್ತು 98 ಇರುತ್ತದೆ ಎಂದರೆ ಸರಿಯಲ್ಲ. ಅನನಪೂರ್ಣಮ್ಮ ಮತ್ತು ಗೌರಮ್ಮ ಇವರ ಜೊತೆ ಯಾವುದೇ ದ್ವೇಷ ಇಲ್ಲ ಎಂದರೆ ಸರಿ. ದಾವಾ ಸ್ವತ್ತು ಮತ್ತು ಮೇಲೆ ತಿಳಿಸಿದ ಎರಡು ಸೈಟ್ ಗಳನ್ನು ಖರೀದಿ ಮಾಡಿದ ದಿನದಿಂದಲೂ 1 ನೇ ಪ್ರತಿವಾದಿಯೇ ಅವುಗಳ ಕಬ್ಜೆಯಲ್ಲಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯೇ ದಾವಾ ಸ್ವತ್ತಿಗೆ ಕಂದಾಯ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಕಟ್ಟಿರುತ್ತೇನೆ. ಕಟ್ಟಿದ್ದೇನೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ. ದಾವಾ ಸ್ವತ್ತಿನ ಖಾತೆ 1 ನೇ ಪ್ರತಿವಾದಿ ಹೆಸರಿಗೆ ಇದೆ ಎಂದರೆ ಸರಿಯಲ್ಲ. ಆದ್ದರಿಂದ 1 ನೇ ಪ್ರತಿವಾದಿಗೆ ಹೊರತು ಪಡಿಸಿ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ಸ್ವತ್ತನು ಕಬಳಿಸುವ ಉದ್ದೇಶದಿಂದ 18-06.2019 ರಂದು ವಕೀಲರ ಮೂಲಕ ಸುಳ್ಳು ನೋಟೀಸ್ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯಯು 28.08.2019 ರಂದು ಸದರಿ ನೋಟೀಸಿಗೆ ಪ್ರತ್ಯುತ್ತರ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಕೊಟ್ಟಿದ್ದಾರೆ ಆದರೆ ಅದು ಸುಳ್ಳು ಎಂದು ನುಡಿಯುತ್ತಾರೆ. 3 ಮತ್ತು 4 ನೇ ಪ್ರತಿವಾದಿಯವರಿಗೆ ವಕೀಲರ ಮೂಲಕ ನೋಟೀಸ್ ಕೊಡಿಸಿದ್ದೆ ಆದರೆ ಅವರು ತೆಗೆದುಕೊಂಡಿರುವುದಿಲ್ಲ. ಅವರಿಗೆ ನೋಟೀಸ್ ಕೊಟ್ಟ ದಿನಾಂಕ ನೆನಪಿಲ್ಲ. ನೋಟೀಸ್ ಕೊಟ್ಟ ಬಗ್ಗೆ ದಾಖಲಾತಿ ಹಾಜರುಪಡಿಸಲಾಗಿದೆ ಎಂದರೆ ಸಾಕ್ಷಿಯು ಅವರಿಗೆ ಕಳುಹಿದ್ದೇವೆ ಆದರೆ ಅವರು ತೆಗೆದುಕೊಂಡಿಲ್ಲ ಎಂದು ನುಡಿಯುತ್ತಾರೆ.



ದಾವಾ ಸ್ವತ್ತಿಗೆ ಎಂದು ತೋರಿಸಲು ಖಾತಾ ನಕಲನ್ನು ಹಾಜರುಪಡಿಸಿರುತ್ತೇನೆ. ಯಾವ ದಿನಾಂಕ ದಂದು ನನ್ನ ಹೆಸರಿಗೆ ಖಾತೆ ಬಂದಿದೆ ನನಗೆ ನೆನಪಿಲ್ಲ. ನನ್ನ ಹೆಸರಿಗೆ ದಾವಾ ಸ್ವತ್ತು ಮಂಜೂರು ಮಾಡಿಲ್ಲ ಮತುತ ದಾಖಲೆ ಇಲ್ಲ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿಗೆ ನನ್ನ ಹಕ್ಕು ಪತ್ರ ಕೊಡುವಂತೆ ಕೇಳಿದ್ದೇನೆ. ಅವರು ಸದರಿ ಹಕ್ಕು ಪತ್ರವನ್ನು ಕೊಟ್ಟಿರುವುದಿಲ್ಲ. ನನಗೆ ಹಕ್ಕು ಪತ್ರವನ್ನು ಕೊಟ್ಟಿಲ್ಲ ಎಂದು 3 ನೇ ಪ್ರತಿವಾದಿ ವಿರುದ್ಧ ದೂರು ಕೊಟ್ಟಿರುತ್ತೇನೆ. ಸದರಿ ದೂರಿನ ಆಧಾರದ ಮೇಲೆ ಯಾವುದೇ ಪ್ರಕರಣ ದಾಖಲಾಗಿಲ್ಲ. ನಾನು ದೂರು ಕೊಡದ ಕಾರಣ ಪ್ರಕರಣ ದಾಖಲಾಗಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಹೆಸರನ್ನು ರಂಗಣ್ಣ ಎನ್ನುವ ಬದಲು ಗಂಗಣ್ಣ ದಾವಾ ಸ್ವತ್ತಿನ ದಾಖಲಾತಿಯಲ್ಲಿ ನಮೂದಗಿರುವ ಬಗ್ಗೆ ಪುರಸಭೆಯುಲ್ಲಿ ವಿಚಾರಿಸಿದ್ದೇನೆ ಅವರು ನ್ಯಾಯಾಲಯದಿಂದ ಆದೇಶ ತರುವಂತೆ ತಿಳಿಸಿರುತ್ತಾರೆ.

4 ವರ್ಷಗಳ ಹಿಂದೆ ಪುರಸಭೆಗೆ ಸದರಿ ಅರ್ಜಿಯನ್ನು ಕೊಟ್ಟಿದ್ದೆ. ಅರ್ಜಿ ಕೊಟ್ಟಿದ್ದ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ಪುರಸಭೆ ದಾಖಲಾತಿಗಳಲ್ಲಿ ಯಾವುದೇ ತಪ್ಪಾಗಿಲ್ಲದ ಕಾರಣ ನಾನು ಯಾವುದೇ ಅರ್ಜಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ವಿರ್‌ದ್ದ ದೂರು ದಾಖಲು ಮಡಿರುತ್ತೇನ. ಸದರಿ ದೂರನ್ನು 3 ವರ್ಷದ ಹಿಂದೆ ಕೊಟ್ಟಿದ್ದೆ. ಅದಕ್ಕೆ ಸಂಬಧಿಸಿದಂತೆಯಾವುದೇ ಪ್ರಕರಣ ದಾಖಲಾಗಿಲ್ಲ. 2 ನೇ ಪ್ರತಿವಾದಿಯ ವಿರುದ್ದವೂ ಯವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ.

ದೊಡ್ಡೇರಿ ಗ್ರಾಮದಲ್ಲಿ ಕರಿಯಮ್ಮ ಕೋಂ ಗಂಗಣ್ಣ ಹೆಸರಿನ ವ್ಯಕ್ತಿ ಇಲ್ಲ ಎಂದು ಸುಳ್ಳು ಸಾಕ್ಷ್ಯ ಕೊಟಿಟದ್ದೇನೆ ಎಂದರೆ ಸರಿಯಲ್ಲ . ದೊಡ್ಡೇರಿ ಗ್ರಾಮದಲ್ಲಿ ರಂಗಣ್ಣನ ಪತ್ನಿ ನಾನು ಒಬ್ಬಳೇ ಇರುವ ಕಾರಣ ಸದರಿ ಗ್ರಾಮದಲ್ಲಿ ಕರಿಯಮ್ಮ ಕೋಂ ಗಂಗಣ್ಣ ಇಲ್ಲ ಎಂದು ಹೇಳಿದ್ದೇನೆ. ದೊಡ್ಡೇರಿ ಗ್ರಾಮದಲ್ಲಿರುವ ಹೆಣ್ಣು ಮಕ್ಕಳ ಹೆಸರನ್ನು ಹೇಳಲು ಆಗುವುದಿಲ್ಲ. ಅಲ್ಲಿ ವಾಸವಿರುವ ಹೆಣ್ಣು ಮಕ್ಕಳ ಹೆಸರು ಹೇಳಲು ಆಗುವುದಿಲ್ಲ. ಸದರಿ ಗ್ರಾಮದಿಂದ ಹೆಣ್ಣು ಮಕ್ಕಳು ಬೆಂಗಳೂರು ಕಡೆಗೆ ಕೆಲಸಕ್ಕೆ ಹೋಗುತ್ತಿರುತ್ತಾರೆ.

2 ನೇ ಪ್ರತಿವಾದಿಯು ಗಾನಪ್ಪನಹಟ್ಟಿ ಗ್ರಾಮದವರು ಎಂದು ಸುಳ್ಳು ಸಾಕ್ಷ್ಯ ಕೊಟ್ಟರುತ್ತೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಗಾನಪ್ಪನಹಟ್ಟಿಯವಳು ಎಂದು 3 ನೇ ಪ್ರತಿವಾದಿಯವರು ತಿಳಿಸಿರುತ್ತಾರೆ. 2 ನೇ ಪ್ರತಿವಾದಿ ಕರಿಯಮ್ಮ ಕೋಂ ಗಂಗಣ್ಣ, ಗಾನಪ್ಪನಹಟ್ಟಿ ಇವರ ಸಾಕ್ಷ್ಯ ಮಾಡಿಸಲು ಅಡಚಣೆ ಇಲ್ಲ ಎಂದರೆ ಸಾಕ್ಷಿಯು ಅವರನ್ನು ನನಗೆ ತೋರಿಸಿಲ್ಲ ಎಂದು ನುಡಿಯುತ್ತಾರೆ. ಸದರಿ ಕರಿಯಮ್ಮಳನ್ನು 3 ನೇ ಪ್ರತಿವಾದಿ ನನಗೆ ತೋರಿಸಬೇಕಾಗಿತ್ತು.



3 ನೇ ಮತ್ತು 1 ನೇ ಪ್ರತಿವಾದಿ ನಡುವೆ ಯಾವುದೇ ಸಂಬಂಧವಿಲ್ಲ ಎಂದರೆ ಸಾಕ್ಷಿಯು ಅವರಿಬ್ಬರು ಸೇರಿ ದಾವಾ ಸ್ವತ್ತನ್ನು ಮಾಡಿಕೊಂಡಿದ್ದಾರ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿಯು ದಾವಾ ಸ್ವತ್ತನ್ನು ಮಾರಾಟ ಮಡಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ14.12.2010 ರಂದು 1 ನೇ ಪ್ರತಿವಾದಿಯು ದಾವಾ ಸ್ವತ್ತನ್ನು ಖರೀದಿ ಮಾಡಿದ್ದರೂ ಸಹಾ 2005-06 ರಲ್ಲಿ ಅವರಿಗೆ ಹೆಸರಿಗೆ ಖಾತೆ ಬದಲಾವಣೆ ಆಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2005-06 ರಲ್ಲಿ ಖಾತೆ 1 ನೇ ಪ್ರತಿವಾದಿ ಹೆಸರಿಗೆ ಖಾತೆ ಇದ್ದ ಬಗ್ಗೆ ದಾಖಲೆ ಎಂದರೆ ಖಾತಾ ಎಕ್ಸ್ ಟ್ರಾಕ್ಟ್ ಮತ್ತು ಪೋಟೋ ಹಾಜರು ಪಡಿಸಿದ್ದೇನೆ. 1 ನೇ ಪ್ರತಿವಾದಿ ಖರೀದಿ ಮಾಡಿರುವ ಸ್ವತ್ತನ್ನು ಎತ್ತಿಹಾಕುವ ಉದ್ದೇಶದಿಂದ ಸುಳ್ಳು ದಾವಾ ಮಾಡಿದ್ದೇನೆ ಎಂದರೆ ಸರಿಯಲ್ಲ. 2019 ರಲ್ಲಿ ನಾನು ಮನೆ ಕಟ್ಟಲು ಪ್ರಯತ್ನಿಸಿದಾಗ 1 ನೇ

ಪ್ರತಿವಾದಿಯು ಅಡ್ಡಿ ಪಡಿಸಿದನು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆ ಕಟ್ಟಲು ಪುರಸಭೆಯಿಂದ ಪರವಾನಿಗೆ ಪಡೆದುಕೊಂಡಿಲ್ಲ. ನನಗೆ ತೊಂದರೆ ಕೊಡುವಾಗ ಬೆಳಿಗ್ಗೆ 11-00 ಗಂಟೆ ಸುಮಾರಿಗೆ 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಇದ್ದರು. ನನಗೆ ತೊಂದರೆ ಕೊಟ್ಟ ಬಗ್ಗೆ 1 ನೇ ಪ್ರತಿವಾದಿ ವಿರುದ್ದ ಪೊಲೀಸರಿಗೆ ದೂರನ್ನು ಕೊಟ್ಟಿರುತ್ತೇನೆ. ಸದರಿ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಾಗಿಲ್ಲ.

2 ನೇ ಪ್ರತಿವಾದಿಯ ವಿಳಾಸವನ್ನು ವಕೀಲರಿಗೆ ನಾನೇ ಕೊಟ್ಟಿರುತ್ತೇನೆ. ನನ್ನ ಗಂಡನ ವಿರುದ್ದ ಜೀವನಾಂಶ ಕೇಳಿ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿ. ನನ್ನ ಗಂಡನ ಹೆಸರು ಸಣ್ಣ ರಂಗಪ್ಪ ಎಂದರೆ ಸಾಕ್ಷಿಯು ರಂಗಪ್ಪ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಆಧಾರ್ ಕಾರ್ಡ ಇರುತ್ತದೆ. ಅದನ್ನು ಹಾಜರು ಪಡಿಸಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.